**ನೌಕರರನ್ನು ಖಾಯಂಗೊಳಿಸುವುದು**

**(260) 150**

**ಶ್ರೀ ರುದ್ರೇಶಗೌಡ.ವೈ.ಎನ್ (ಬೇಲೂರು)**

ಅ) ಕಂದಾಯ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ನೇಮಕಗೊಂಡಿರುವ ನಕಲುಗಾರರು ಹಾಗೂ ಇತರೆ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ವಿಷಯ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈಗಾಗಲೇ ನೇಮಕಾತಿ ವಯೋಮಿತಿ ದಾಟಿರುವ ಇವರ ಸೇವಾ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) 1. ತಾತ್ಕಾಲಿಕವಾಗಿ ನೇಮಕಗೊಂಡಿರುವ ನಕಲುಗಾರರ ಹುದ್ದೆಗಳನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

2. ಇತರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ವಿಷಯವು ಪರಿಶೀಲನೆಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.

**ರಾಷ್ಟ್ರ ಕೂಟರ ಕೋಟೆ ಜೀರ್ಣೋದ್ಧಾರ**

**(203) 328**

**ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)**

ಅ) ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ರಾಷ್ಟ್ರಕೂಟರ ಕೋಟೆಯ (ಕನ್ನಡದ ಮೊಟ್ಟಮೊದಲ ಕೃತಿ ಕವಿರಾಜಮಾರ್ಗ ರಚಿತ ನೃಪತುಂಗ ಆಸ್ಥಾನ) ಜೀರ್ಣೋದ್ಧಾರದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಹೈದರಾಬಾದ್ ಕರ್ನಾಟಕ ಭಾಗದ ಜನತೆಯ ಬಹಳ ದಿವಸ ಬೇಡಿಕೆಯನ್ನು ಸರ್ಕಾರ ಕೂಡಲೇ ಕಾರ್ಯಗತಗೊಳಿಸುವುದೇ?

ಇ) ಜೀರ್ಣೋದ್ಧಾರ ಕಾರ್ಯಕ್ರಮವನ್ನು ಎಂದಿನಿಂದ ಹಮ್ಮಿಕೊಳ್ಳಲಾಗುವುದು?

**ಶ್ರೀ ಗೋವಿಂದ ಎಂ. ಕಾರಜೋಳ**

**(ಮಾನ್ಯ ಸಣ್ಣ ನೀರಾವರಿ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಹೌದು

ಆ) ಕಾರ್ಯಗತಗೊಳಿಸಲಾಗುತ್ತದೆ.

ಇ) 13ನೇ ಹಣಕಾಸು ಯೋಜನೆಯಡಿ ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ರಾಷ್ಟ್ರಕೂಟರ ಕೋಟೆಯ ಸಂರಕ್ಷಣೆಗಾಗಿ ರೂ.90.00 ಲಕ್ಷಗಳನ್ನು (ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ನಿಗಧಿಪಡಿಸಿಕೊಂಡು ಕರ್ನಾಟಕ ಪಾರದರ್ಶಕ ಕಾಯ್ದೆಯ ನಿಯಮವಳಿಗಳನ್ವಯ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ.

**ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರ ಸಾಲ ಮನ್ನಾ**

**ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.(ಬಸವನಗುಡಿ)**

**(258) 370**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರಿಗೆ ನೀಡಲಾಗಿರುವ ವಿವಿಧ ಬಗೆಯ ಸಾಲಗಳಲ್ಲಿ ಬೆಳೆ ಸಾಲ, ಕೃಷಿ ಸಾಲ, ಇತ್ಯಾದಿ ಎಷ್ಟು ಅಸಲು ಹಾಗೂ ಬಡ್ಡಿ ಮನ್ನಾ ಮಾಡಲಾಗಿದೆ? (ಶಾಖಾವಾರು ವರದಿ ನೀಡುವುದು)

ಆ) ಕೃಷಿಯಲ್ಲಿ ಬಳಕೆಯಾಗುವ ವಿವಿಧ ಯಂತ್ರೋಪಕರಣಗಳಿಗೆ ಸಹಾಯಧನದ ದರವೆಷ್ಟು?

ಇ) 2012–13ನೇ ಸಾಲಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ರೈತರಿಗೆ ನೀಡಿರುವ ವಿವಿಧ ರೀತಿಯ ಸಾಲವೆಷ್ಟು? (ಶಾಖಾವಾರು ವರದಿ ನೀಡುವುದು)